# ನೈಸರ್ಗಿಕ ಸುಂದರ ಕೂದಲಿನ ಸಂತಸ ಅನುಭವಿಸಿರಿ.

Himalaya®
HERBAL HEALTHCARE




ಶಾಂಪೂಗಳು, ನಿಮ್ಮ ಕೂದಲಿನಲ್ಲಿ ನಿಧಾನವಾಗಿ ಸೇರಿಕೊಳ್ಳುವಂತಹ ಎಣ್ಣೆ, ಕೊಳೆ, ತಲೆಹೊಟ್ಟು ಮತ್ತಿತರ ಪರಿಸರೀಯ ಪ್ರದೂಷಣಗಳನ್ನು ತೆಗೆದುಹಾಕುತ್ತದೆಂದು ನಮಗೆಲ್ಲರಿಗೂ ತಿಳಿದಿದೆ. ಹಾಗಿದ್ದರೂ ಶ್ಯಾಂಪೂ ನಿಮ್ಮ ಕೂದಲನ್ನು ಜಡ, ಗುಂಗುರು ಹಾಗೂ ನಿರ್ವಹಿಸಲಾಗದಂತೆ ಮಾಡುವುದನ್ನು ತಪ್ಪಿಸಲು, ನೈಸರ್ಗಿಕ ಎಣ್ಣೆಯನ್ನು ತೆಗೆದುಹಾಕದೆಯೇ ಬೇಡದ ಪದಾರ್ಥಗಳನ್ನು ತೆಗೆಯಬೇಕು. ಹಾಗೆ ಶ್ಯಾಂಪೂ ಆಯ್ಕೆಯ ವಿಷಯ ಬಂದಾಗ ಚೆನ್ನಾಗಿ ಪ್ಯಾಕ್ ಮಾಡಿರುವ, ಒಳ್ಳೆಯ ವಾಸನೆಯ ಅಥವಾ ಸುಂದರ ಕೂದಲಿನ ಭರವಸೆ ನೀಡುವಂತಹ ವಿಶೇಷ ಪದಾರ್ಥಗಳನ್ನು ಹೊಂದಿರುವುದರ ವೈವಿಧ್ಯಗಳಲ್ಲಿ ಒಂದನ್ನು ಆರಿಸಿಕೊಳ್ಳಲು ನಾವು ಬಯಸುತ್ತೇವೆ. ಶ್ಯಾಂಪೂ ನೊರೆಬಂದರೆ ನಮಗೆ ಸಂತೃಪ್ತಿಯಾಗುತ್ತಲ್ಲದೆ. ನಮ್ಮ ಕೂದಲನ್ನು ಆರೋಗ್ಯಕರವಾಗಿ, ಹೊಳೆಯುವಂತೆ ಹಾಗೂ ಸುಂದರವಾಗಿಸಿ, ದಿನವಿಡೀ ಸುವಾಸನೆಯಿಂದ ತುಂಬಿರುವುದನ್ನು ಪೂರ್ಣವಾಗಿ ನಾವು ಇಷ್ಟಪಡುತ್ತೇವೆ.

ಆದರೆ ನಿಮ್ಮ ಶ್ಯಾಂಪೂ ಯಾವುದರಿಂದ ಮಾಡಲಾಗಿದೆ ಎಂಬುದನ್ನು ತಿಳಿಯಲು ಎಂದಾದರೂ ಪ್ರಯತ್ನಿಸಿದ್ದೀರಾ? ರಾಸಾಯನಿಕ-ಮುಕ್ತ ಎಂದು ಸ್ವತಃ ಹೇಳಿಕೊಳ್ಳುವ ಹಲವಾರು ಶ್ಯಾಂಪೂಗಳು ನಿಜಕ್ಕೂ ಹಲವೊಮ್ಮೆ ಹಾಗಿರುವುದಿಲ್ಲ ಎನ್ನುವುದು ನಿಮಗೆ ಗೊತ್ತೇ? ಶ್ಯಾಂಪೂ ಪ್ಯಾಕ್‌ಗಳ ಹಿಂದೆ ನಮೂದಿಸಿರುವ ಎಲ್ಲ ಪದಾರ್ಥಗಳನ್ನು ಎಂದಾದರೂ ಓದಲು ಪ್ರಯತ್ನಿಸಿದ್ದೀರಾ? ಅಮೋನಿಯಂ ಲಾರೆತ್ ಸಲ್ಫೇಟ್ ಅಥವಾ ಸೋಡಿಯಂ ಲಾರೆತ್ ಸಲ್ಫೇಟ್‌ಗಳಂತಹ ಪದಾರ್ಥಗಳು ನಿಜಕ್ಕೂ ನಿಮ್ಮ ಕೂದಲಿಗೆ ಏನು ಮಾಡುತ್ತವೆ ಎಂಬುದು ನಿಮಗೆ ಗೊತ್ತಿದೆಯೇ?

ಅಮೋನಿಯಂ ಲಾರೆತ್ ಸಲ್ಫೇಟ್(ಎಎಲ್‌ಇಎಸ್) ಮತ್ತು ಸೋಡಿಯಂ ಲಾರೆತ್ ಸಲ್ಫೇಟ್‌ಗಳು (ಎಸ್‌ಎಲ್‌ಇಎಸ್) ಶ್ಯಾಂಪೂಗಳಲ್ಲಿ ಬಳಸುವಂತಹ ನೊರೆ ಬರಿಸುವ ಸಾಮಗ್ರಿಗಳಾಗಿವೆ. ಅವುಗಳನ್ನು ಎಥೊಕ್ಸೈಲೇಶನ್ ಪ್ರಕ್ರಿಯೆಯಿಂದ ಮಾಡಲಾಗುತ್ತದೆ. ಆ ಎರಡೂ ಕಲ್ಮಶವಾಗಿ ಸಂಪೂರ್ಣವಾಗಿ ತೆಗೆದುಹಾಕಲಾಗದ ಡಯಾಕ್ಸೇನ್ ಹೊಂದಿವೆ. ಜೊತೆಗೆ ಒಂದು ನಿರ್ದಿಷ್ಟ ಮಟ್ಟದಿಂದ ಮೇಲಿದ್ದರೆ ಈ ಕಲ್ಮಶವು ಕ್ಯಾನ್ಸರ್‌ಜನಕವಾಗುತ್ತದೆ.

ಕಲ್ಮಶಗಳಾಗಿ ನೈಟ್ರೊಸಮೈನ್ಸ್ ಹೊಂದಿರುವಂತಹ, ಎರಡೂ ಕ್ಯಾನ್ಸರ್ ಜನಕವಾಗಿರುವಂತಹ ಕೊಕೊಮೊನೊಎಥನೊಲಮೈಡ್ ಮತ್ತು ಕೊಕೊಡೈಥನೊಲಮೈಡ್‌ನಂತಹ ರಾಸಾಯನಿಕಗಳನ್ನೂ ಕೂಡ ಶ್ಯಾಂಪೂಗಳು ಹೊಂದಿರುತ್ತವೆ. ಈ ಪದಾರ್ಥಗಳು ಕೂಡ ಸುರಕ್ಷತೆಯ ವಿಷಯದಲ್ಲಿ ವಿವಾದಾಸ್ಪದವಾಗಿವೆ.

ಎಎಲ್‌ಇಎಸ್ ಮತ್ತು ಎಸ್‌ಎಲ್‌ಇಎಸ್‌ಗಳಿಗೆ ಹೋಲಿಸಿದರೆ, ಅಮೋನಿಯಂ ಲಾರಿಲ್ ಸಲ್ಫೇಟ್ (ಎಎಲ್‌ಎಸ್) ಮತ್ತು ಸೋಡಿಯಂ ಲಾರಿಲ್ ಸಲ್ಫೇಟ್‌ಗಳು (ಎಸ್‌ಎಲ್‌ಎಸ್) ಕಲ್ಮಶಗಳಾಗಿ ಡಯಾಕ್ಸೇನ್ ಹೊಂದಿಲ್ಲದಿರುವುದರಿಂದ ಸ್ವಲ್ಪ ಸುರಕ್ಷಿತವಾದುದಾಗಿವೆ.

ಆರಂಭದಲ್ಲಿ ರೇಷ್ಮೆಯಂತಹ, ತೇವಾಂಶದಂತಹ ಅನುಭವವನ್ನು ಸೃಷ್ಟಿಸುವ ಹಲವಾರು ಶಾಂಪೂಗಳಲ್ಲಿ ಕೂಡ ಕೆಲವೊಂದು ರಾಸಾಯನಿಕಗಳಿವೆ. ಈ ರಾಸಾಯನಿಕಗಳು ನಂತರ ನೆತ್ತಿಯ ಮೇಲೆ ಸೇರಿಕೊಂಡು, ನೈಸರ್ಗಿಕ ತೈಲದ ಸ್ರವಿಸುವಿಕೆಯ ಪ್ರಕ್ರಿಯೆಯ ಮೇಲೆ ಪರಿಣಾಮವನ್ನೂ ಬೀರಿ, ಕೂದಲಿನ ಹಾನಿಗೆ ಕಾರಣವಾಗಬಹುದು. ಬದಲಿಗೆ ಕೊಬ್ಬರಿ ಮತ್ತು ಧಾನ್ಯವನ್ನು ಬಳಸಿ ಮಾಡಿದಂತಹ ನೈಸರ್ಗಿಕ ಉತ್ಪನ್ನಗಳನ್ನು ರಾಸಾಯನಿಕ ಆಧಾರಿತ ಶ್ಯಾಂಪೂಗಳಿಗೆ ಬದಲಿಯಾಗಿ ಬಳಸಬಹುದು.

ಬಹುತೇಕ ರಾಸಾಯನಿಕ ಆಧಾರಿತ ಉತ್ಪಾದನೆಗಳು ಈ ಸಾಮಗ್ರಿಗಳನ್ನು ಹೊಂದಿರುವುದರಿಂದ ಈ ಉತ್ಪಾದನೆಗಳಿಂದ ದೂರವಿರುವುದೇ ಒಳ್ಳೆಯದು. ಹಾಗಿದ್ದರೂ ನಿಜವಾದ ಪ್ರಶ್ನೆ ಇರುವುದು ಹೇಗೆ ಎನ್ನುವಲ್ಲಿ ? ಇದು ಸುಲಭ. ಸಾಮಗ್ರಿಗಳ ಬಗ್ಗೆ ತಿಳಿಯಲು ನಿಮ್ಮ ಶ್ಯಾಂಪೂ ಪ್ಯಾಕ್ ಹಿಂದೆ ಇರುವ ಪಟ್ಟಿಯನ್ನು ಓದುವ ಅಭ್ಯಾಸ ಮಾಡಿಕೊಳ್ಳಿ. ನೈಸರ್ಗಿಕ ಪದಾರ್ಥಗಳೊಂದಿಗೆ ನೈಸರ್ಗಿಕ ಉತ್ಪಾದನೆಗಳನ್ನು ಬಳಸುವುದೇ ಒಳ್ಳೆಯದು ಎಂಬ ಸಲಹೆ ನೆನಪಿಡಿ. ಸಂಕ್ಷಿಪ್ತದಲ್ಲಿ ಹೇಳುವುದಾದರೆ ಎಸ್‌ಎಲ್‌ಇಎಸ್-ಮುಕ್ತ ಶಾಂಪೂಗಳನ್ನು ಬಳಸಿ. ಎಸ್‌ಎಲ್‌ಇಎಸ್ ಮುಕ್ತ ಶಾಂಪೂಗಳನ್ನು ಕಂಡುಹಿಡಿಯುವುದು ಕಷ್ಟವಾದರೂ ಅದು ಅಸಾಧ್ಯವಾದುದೇನಲ್ಲ.

## ಎಸ್‌ಎಲ್‌ಇಎಸ್-ಮುಕ್ತ ಕೂದಲು ಪಾಲನೆ

ನೈಸರ್ಗಿಕ ಕೂದಲು ಪಾಲನೆಯ ಉತ್ಪಾದನೆಗಳಿಗಾಗಿ ಶಾಪಿಂಗ್ ಮಾಡುವಾಗ ಕೆಲವು ಸಲಹೆಗಳು

- ಬಹುತೇಕ ನೈಸರ್ಗಿಕ ಶ್ಯಾಂಪೂಗಳು ಸೋಡಿಯಂ ಲಾರೆತ್ ಸಲ್ಫೇಟ್‌ಹೊಂದಿರುವುದಿಲ್ಲ. ಸೋಡಿಯಂ ಲಾರೆತ್ ಸಲ್ಫೇಟ್‌ನ ಪ್ರಾಥಮಿಕ ಉದ್ದೇಶವೆಂದರೆ ನೊರೆಯನ್ನು ಸೃಷ್ಟಿಸುವುದಾಗಿದ್ದು ಅದು ಅವಶ್ಯವಾಗಿ ಸ್ವಚ್ಛ ಕೂದಲಿನ ಖಾತ್ರಿ ನೀಡುವುದಿಲ್ಲ. ಇಲ್ಲಿ ಮುಖ್ಯವಾದುದೆಂದರೆ ಕೇವಲ 'ನೈಸರ್ಗಿಕ' ಎನ್ನುವ ಪದವನ್ನು ಹುಡುಕುವುದಲ್ಲ. ರಾಸಾಯನಿಕಗಳ ನಮೂದು, ಅದರಲ್ಲಿಯೂ ನಿಮ್ಮ ಕೂದಲಿಗೆ ಹಾನಿ ಎಸಗುವ ಸಾಧ್ಯತೆಯುಳ್ಳವು ಇಲ್ಲ ಎಂಬುದರ ಖಾತ್ರಿಪಡಿಸಿಕೊಳ್ಳಿ.
- ನೈಸರ್ಗಿಕ ಉತ್ಪಾದನೆಗಳಲ್ಲಿಯೂ ಎಣ್ಣೆಯ, ಒಣಗಿದ, ಸಾಮಾನ್ಯ, ಬಣ್ಣದ ಈ ಮುಂತಾದ ವಿಭಿನ್ನ ಕೂದಲಿನ ಬಗೆಗಳಿಗೆ ಲಭ್ಯವಿರುವಂತಹ ಉತ್ಪಾದನೆಗಳು ಇರುತ್ತವೆ. ನಿಮ್ಮ ಕೂದಲಿನ ಬಗೆಗೆ ಅತ್ಯಂತ ಚೆನ್ನಾಗಿ ಹೊಂದುವಂತಹ ಉತ್ಪಾದನೆಯನ್ನು ಬಳಸಿರಿ.
- ಮಾರುಕಟ್ಟೆಯಲ್ಲಿ ಬಹಳಷ್ಟು ಉತ್ಪಾದನೆಗಳು ಲಭ್ಯವಿದೆಯಾದರೂ, ಅವುಗಳ ಆಯ್ಕೆ ಮಾಡುವಾಗ ಸರಿಯಾದ ನಿರ್ಧಾರ ಮಾಡುವುದು ಅಂತಿಮವಾಗಿ ನಿಮಗೇ ಬಿಟ್ಟಿರುವ ವಿಷಯ ವಾಗಿರುತ್ತದೆ. ನೀವು ಆರೋಗ್ಯಕರ, ನೈಸರ್ಗಿಕವಾಗಿ ಸುಂದರ ಕೂದಲನ್ನು ಬಯಸಿದರೆ ಈ ಕೆಳಗಿನ ಪದಾರ್ಥಗಳಿರುವ ಮೂಲಿಕೆಗಳ ಉತ್ಪನ್ನಗಳನ್ನು ಹುಡುಕಿರಿ:
- ಆಂಟಿಸೆಪ್ಟಿಕ್ ಆಗಿ ಬಳಸುವಂತಹ **ಟೀ ಟ್ರೀ ಆಯಿಲ್** ತಲೆಹೊಟ್ಟು, ತುರಿಕೆ ಮತ್ತಿತರ ಗಾಯಗಳಂತಹ ಸೋಂಕುಗಳಿಗೆ ನೈಸರ್ಗಿಕ ಪರಿಹಾರವಾಗಿರುತ್ತದೆ; ಸ್ವೀಟ್ ಇಂದ್ರಜಾವ್ ತಲೆಹೊಟ್ಟು-ನಿರೋಧಕ, ಉರಿ-ನಿರೋಧಕ ಗುಣಗಳನ್ನು ಹೊಂದಿದ್ದು ವಿಭಿನ್ನ ನೆತ್ತಿಯ ಹಾಗೂ ತ್ವಚೆಯ ತೊಂದರೆಗಳಿಗೆ ಚಿಕಿತ್ಸೆ ನೀಡುವಲ್ಲಿ ಸಹಕಾರಿ; **ರೋಸ್‌ಮರಿಯು** ಒಣಗಿದ ತುರಿಕೆಯ ನೆತ್ತಿಗೆ ಶಮನ ನೀಡಿ, ಕಂಡಿಶನ್‌ಗೊಳಿಸುತ್ತದೆ. ಅದು ತಲೆಹೊಟ್ಟು ಮತ್ತಿತರ ನೆತ್ತಿಯ ಸೋಂಕು ತೆಗೆದುಹಾಕುವಲ್ಲಿ ಸಹಕಾರಿ. ಅದು ಕೂದಲು ಬೆಳವಣಿಗೆಯನ್ನು ಮತ್ತು ಕೂದಲಿನ ರಂಧ್ರಗಳನ್ನು ಉತ್ತೇಜಿಸುತ್ತದೆ; ಬೇವು ಬಹು-ಉದ್ದೇಶದ ಮೂಲಿಕೆಯಾಗಿದ್ದು ಬ್ಯಾಕ್ಟೀರಿಯಾ ನಿರೋಧಕ ಹಾಗೂ ಶಿಲೀಂಧ್ರ ನಿರೋಧಕ ಗುಣಗಳನ್ನು ಹೊಂದಿದೆ. ತಲೆಹೊಟ್ಟಿಗೆ ಚಿಕಿತ್ಸೆ ನೀಡುವಲ್ಲಿಯೂ ಅದು ಪರಿಣಾಮಕಾರಿ. **ಚಂದನವು** ತನ್ನ ಉರಿ ನಿರೋಧಕ ಗುಣದೊಂದಿಗೆ ಶಮನದ ಪರಿಣಾಮ ಹೊಂದಿದ್ದು, ತುರಿಕೆಯನ್ನು ನಿಯಂತ್ರಿಸಿ, ನೆತ್ತಿಯನ್ನು ತಣ್ಣಗಾಗಿಸುತ್ತದೆ; ಹಾಗೂ **ನಿಂಬೆಯು**, ಅತ್ಯುತ್ಕೃಷ್ಟ ನೈಸರ್ಗಿಕ ಸ್ವಚ್ಛಕಾರಕವಾಗಿದ್ದು, ಗಟ್ಟಿಯಾದ ಹಾಗೂ ಮಿಂಚುವ ಕೂದಲನ್ನು ಉತ್ತೇಜಿಸುತ್ತದಲ್ಲದೆ ತಲೆಹೊಟ್ಟು ಚಿಕಿತ್ಸೆಗೆ ಸಹಕಾರಿ.
- ತುರಿಕೆ ನಿರೋಧಕ (ಆಂಟಿಪ್ರುರಿಟಿಕ್) ಗುಣಹೊಂದಿರುವ **ಸ್ಮಾಲ್ ಕ್ಯಾಲ್ಟ್ರಾಪ್ಸ್‌ನಂತಹ** ಪದಾರ್ಥಗಳನ್ನು ಪರೀಕ್ಷಿಸಿರಿ. ಅದು ಕೂದಲಿಗೆ ಬಣ್ಣ ಮತ್ತು ಆರೋಗ್ಯ ಒದಗಿಸುವಲ್ಲಿಯೂ ಸಹಕಾರಿ; **ಎಳ್ಳಿನ ಬೀಜ** ಮತ್ತು **ಕಡಲೆ ಬೇಳೆಗಳು** ಪೋಷಕ ಗುಣಗಳನ್ನು ಹೊಂದಿದ್ದು ಕೂದಲಿನ ಎಳೆಗೆ ಶಮನ ನೀಡುತ್ತವೆ, **ಭತ್ತದ ಕಾಳು** ಶೀತಲ ಹಾಗೂ ಶಮನ ಗುಣ ಹೊಂದಿರುತ್ತವೆ; ಖುಸ್-ಖುಸ್ ಸಂಕುಚಿಸುವ ಹಾಗೂ ಶೀತಲ ಗುಣ ಹೊಂದಿದೆ, **ಸೀಗೆಕಾಯಿಯು** ಕೂದಲಿನ ಬೆಳವಣಿಗೆ ವೃದ್ಧಿಸಿ, ಗಂಟು ತೆಗೆಯುವಲ್ಲಿ ಸಹಕರಿಸುತ್ತದೆ, ಅಂತರ ಎಳೆಗಳ ಅಂಟುವಿಕೆ ತಪ್ಪಿಸಿ, ತನ್ಮೂಲಕ ಕೂದಲಿನ ದ್ರವ್ಯರಾಶಿ ಹೆಚ್ಚಿಸುತ್ತದೆ; **ಮೆಂತ್ಯವು** ಕೂದಲು ಉದುರುವುದನ್ನು ತಪ್ಪಿಸಿ, ಬೆಳವಣಿಗೆಗೆ ಉತ್ತೇಜಿಸುತ್ತದೆ. ಅದು ಕೂದಲಿನ ಬೆಳವಣಿಗೆಗೆ ಪೋಷಿಸುವಂತಹ ಲೆಸಿತಿನ್ ಮತ್ತಿತರ ಪ್ರೊಟೀನ್‌ಗಳನ್ನು ಹೊಂದಿದೆ; **ಸಾಮಾನ್ಯ ಗೋಧಿಯು** ಅತ್ಯಂತ ಹೆಚ್ಚಿನ ವಿಟಮಿನ್-ಇ ಸಾಮರ್ಥ್ಯದೊಂದಿಗೆ ಟೊಕೊಫೆರಲ್ಸ್‌ಗಳ ಸಮೃದ್ಧ ಮೂಲವಾಗಿದೆ.

ಆದ್ದರಿಂದ, ಆರೋಗ್ಯಕರ ಹಾಗೂ ನೈಸರ್ಗಿಕವಾದ ಸುಂದರ ಕೂದಲಿಗಾಗಿ, ನೈಸರ್ಗಿಕ ಎಸ್‌ಎಲ್‌ಇಎಸ್-ರಹಿತ ಶ್ಯಾಂಪೂಗಳಿಗೆ ಬದಲಾಗಿರಿ.



MERIDIAN 362